ಸಿಂಧನೂರು ನಗರದಲ್ಲಿನ ಕುಡಿಯುವ ನೀರಿನ ತೊಂದರೆ

೧೫೬೧- ಶ್ರೀ ಕೆ. ವಿರುಪಾಕ್ಷಪ್ಪ (ಸಿಂಧನೂರು) ಮಾನ್ಯ ನಗರಾಭಿವೃದ್ಧಿ ಸಚಿವರು .ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಸಿಂಧನೂರು ನಗರದಲ್ಲಿ ಇಂದಿರಾನಗರ ಮತ್ತು ಎ.ಕೆ. ಗೋಪಾಲನಗರ ಮತ್ತು ಪಿ.ಡಬ್ಲ್ಯೂ.ಡಿ.ಕ್ಯಾಂಪ್ ನಲ್ಲಿ ಕುಡಿಯುವ ನೀರಿನ ತೊಂದರೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಉಪವಿಭಾಗಧಿಕಾರಿಗಳ ಗಮನಕ್ಕೆ ಸಾಕಷ್ಟು ಸಾರಿ ತಂದರೂ ಕೂಡಾ ಕ್ರಮ ಕೈಗೊಂಡಿಲ್ಲದಿರುವುದರ ಕಾರಣವೇನು?*

ಇ) *ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು).

ಅ) ಬಂದಿದೆ.

ಆ) ಈ ತೊಂದರೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಈಗ ಆಡಳಿತಾತ್ಮಕ ಮಂಜೂರಾತಿ ದೊರಕಿರುವ ಅಂದಾಜಿನಲ್ಲಿ ಇಂದಿರಾನಗರ ಎ.ಕೆ. ಗೋಪಾಲ ನಗರ, ಪಿ.ಡಬ್ಲ್ಯೂ.ಡಿ. ಕ್ಯಾಂಪ್ ಬಡಾವಣೆಗಳಲ್ಲಿ ನೀರು ವಿತರಣಾ ಸರಬರಾಜು ಮಾಡುವ ಬಗ್ಗೆ ಅವಕಾಶ ಮಾಡಿರುವುದಿಲ್ಲ. ಆದರೂ ಅಂದಾಜಿನ ಉಳಿತಾಯದಲ್ಲಿ ಕೇವಲ ೯೦ ಎಂ.ಎಂ. ವ್ಯಾಸದ ಪಿ.ವಿ.ಸಿ. ಕೊಳವೆಯನ್ನು ಅಳವಡಿಸಿದೆ. ಈ ಬಡಾವಣೆಗಳಿಗೆ ಶಾಶ್ವತ ನೀರಿನ ಕೊರತೆಯನ್ನು ಪೂರೈಸಲು ಪರಿಷ್ಕೃತ ಅಂದಾಜು ತಯಾರಿಸಿ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು ನಗರ ಮತ್ತು ರಾಜ್ಯದ ಇತರ ನಗರಗಳಲ್ಲಿ ಅಪಾಯಕಾರಿ ಕಶ್ಮಲಗಳಿಂದ ಮಾಲಿನ್ಯ

778 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಸಕ್ಕರೆ,ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಬೆಂಗಳೂರು ನಗರ ಮತ್ತು ರಾಜ್ಯದ ಇತರ ನಗರಗಳಲ್ಲಿನ ಆಸ್ಪತ್ರೆಗಳು ಅಪಾಯಕಾರಿ ಕಶ್ಮಲದಿಂದ ಉಂಟಾಗುವ ಹಾನಿಯ ಬಗ್ಗೆ ರಾಜ್ಯ ಏನಾದರೂ ಅಧ್ಯಯನ ಮಾಡಿದೆಯೇ?*

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಅಧ್ಯಯನದಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಇ) ಅಂತಹ ಅಪಾಯಕಾರಿ(ಕಶ್ಮಲ)ಯನ್ನು ಸುರಕ್ಷಿತ ಜಾಗಕ್ಕೆ ಸಾಗಿಸಿ ಅದನ್ನು ಸುಡುವ ಏರ್ಪಾಡನ್ನು ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಎನು ಆಸ್ಪತ್ರೆಗಳ ಮತ್ತು ನರ್ಸಿಂಗ್

ಹೋಂಗಳಲ್ಲಿ ಅಂಗವಿಕಲ ರೋಗಿಗಳ ಗಾಯದಿಂದ ತೆಗೆದ ಲಸಿಕೆಯನ್ನು ಮತ್ತು ಶಸ್ತ್ರ ಚಿಕಿತ್ಸೆಯಾಗಿ ನಂತರ ಮನುಷ್ಯನ ದೇಹದ ಭಾಗಗಳನ್ನು ಕತ್ತರಿಸಿದ ತುಂಡುಗಳನ್ನು ಕಸದ ತೊಟ್ಟಿಯಲ್ಲಿ ಹಾಕುವ ಪರಿಪಾಠವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ; ಹಾಗೂ

ಈ) ಹಾಗಿದ್ದಲ್ಲಿ, ಇದನ್ನು ತಪ್ಪಿಸಿ ಬೇರೆ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ? (ವಿವರ ನೀಡುವುದು)

ಶ್ರೀ ಪಿ.ಸಿ. ಸಿದ್ದನಗೌಡರು (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ರಾಜ್ಯ ಸಚಿವರು).

ಅ) ಇಲ್ಲ.

ಆ) 'ಅ' ಕ್ಕೆ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಇ) ಬಂದಿದೆ,

ವೈದ್ಯಕೀಯ ಅಪಾಯಕಾರಿ ತನ ಕಶ್ಮಲವನ್ನು ವಿಲೇವಾರಿ ಮಾಡುವ ಬಗ್ಗೆ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯವು ಬಯೋ ಮೆಡಿಕಲಾ ವೇಸ್ಟ್ (ನಿರ್ವಹಣೆ) ಮತ್ತು ವ್ಯವಹರಣೆ) ಕರಡು ನಿಯಮ ೧೯೯೫ನ್ನು ಪರಿಸರ ಕಾಯ್ದೆ ಯಡಿ ಪ್ರಕಟಿಸಿರುತ್ತದೆ. ಈ ನಿಯಮವು ಜಾರಿಯಾದ ನಂತರ ಅದರಲ್ಲಿನ ಕಾರ್ಯ ವಿಧಾನವ ಸರಹದ್ದಿನಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಅಗತ್ಯ ಕ್ರಮ ಕೈಗೊಳ್ಳುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಅಧ್ಯಕ್ಷರೇ, ನನ್ನದೊಂದು ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೆ, ಪಂಚಾಯತ್ ರಾಜ್ಯ ಮಂತ್ರಿಗಳಿಗೆ.

ಅಧ್ಯಕ್ಷರು:- ಅಜೆಂಡಾದಲ್ಲಿ ಇಲ್ಲ, ಆದ್ದರಿಂದ ಮುಂದೆ ಬರುತ್ತದೇನೋ ನೋಡೋಣ.

ಶ್ರೀ ಡಿ.ಕೆ. ಶಿವಕುಮಾರ್:- ಇದನ್ನು ಕಳುಹಿಸಿ ಮೂರು ದಿವಸವಾಯಿತು. ಮೂರು ದಿನದಿಂದ ಕಾಯ್ದುಕೊಂಡು ಕುಳಿತಿದ್ದೇನೆ.

ಅಧ್ಯಕ್ಷರು: ಆಯಿತು,ಆಯುತು, ಮತ್ತೆ ಮಾತನಾಡೋಣ ಛೇಂಬರ್‌ನಲ್ಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿ ಜಂಟೀ ಸದನ ಸಮಿತಿಯನ್ನು ಮಾಡುತ್ತೇವೆಂದು ಹೇಳಿದರು. ಇದರಲ್ಲಿ ವಿಧಾನ ಪರಿಷತ್ ಮತ್ತು ವಿಧಾನ ಸಭೆಯ ಸದಸ್ಯರನ್ನು ಸೇರಿಸಿಕೊಂಡು ಜಂಟಿ ಸದನ ಸಮಿತಿಯನ್ನು ಮಾಡುತ್ತೇವೆಂದರು. ಅದನ್ನು ತಾವು ಇವೊತ್ತು ಹೌಸ್‌ನಲ್ಲಿ ಅನೌನ್ಸ್ ಮಾಡುತ್ತೀರೋ, ಮತ್ತು ಎಷ್ಟು ದಿವಸದೊಳಗೆ ಆ ವರದಿಯನ್ನು ಕೊಡುತ್ತೀರಿ. ಎನ್ನುವುದನ್ನು ಹೇಳಬೇಕು. ಏಕೆಂದರೆ ಅದು ಬಹಳ ಪ್ರಮುಖವಾದ ವಿಷಯ. ಆದುದರಿಂದ ಒಂದು ತಿಂಗಳೊಳಗೆ, ಎರಡು ತಿಂಗಳೊಳಗೆ ಅಥವಾ ಮೂರು ತಿಂಗಳೊಳಗೆ

ವರದಿ ಕೊಡುತ್ತೀರಾ ಎನ್ನುವುದನ್ನು ಹೇಳಿ.

ಅಧ್ಯಕ್ಷರು:- ಸಮಿತಿಯ ರೂಪುರೇಷೆಗಳನ್ನು ನಾವು ನನ್ನ ಛೇಂಬರ್ ನಲ್ಲಿ ಕುಳಿತು ಚರ್ಚೆಮಾಡಿ ,ಆಮೇಲೆ ಒಂದು ತೀರ್ಮಾನಕ್ಕೆ ಬರೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆದರೆ ಅದಕ್ಕೆ ಒಂದು ಹೆಸರನ್ನು ಹಾಗೂ ಇತಿಮಿತಿಗಳನ್ನು ಹಾಕಬೇಕು.

ಅಧ್ಯಕ್ಷರು:- ಇವೆಲ್ಲವುಗಳನ್ನೂ ತೀರ್ಮಾನ ಮಾಡಿಕೊಂಡು ಬಂದು ಇಲ್ಲಿ ಅನೌನ್ಸ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಈ ಹೌಸನ್ನು ಅಡ್ವರ್ನ ಮಾಡುವುದಕ್ಕೆ ಮುಂದೆ ಅನೌನ್ಸ್ ಮಾಡ ಬೇಕು.

ಅಧ್ಯಕ್ಷರು:- ಆಯಿತು, ಆಯಿತು.

ಶ್ರೀ ವಾಟಾಳ್ ನಾಗರಾಜ:- ಅಧ್ಯಕ್ಷರೇ, ಈ ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ತಮಗೆ ಹೇಳಿದ್ದೆ.

ಅಧ್ಯಕ್ಷರು:- ನೀವು ಶೂನ್ಯ ವೇಳೆಯಲ್ಲಿ ಅವಕಾಶವನ್ನು ಬಳಸಿಕೊಳ್ಳಲಿಲ್ಲ. ಈಗ ಶೂನ್ಯ ವೇಳೆ ಅಲ್ಲ. ದಯಮಾಡಿ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ಇದನ್ನು ಯಾವಾಗ ತಗೆದುಕೊಳ್ಳುವುದು.

ನಿಯಮ: ೪೫ರ ಮೇರೆಗೆ ಚರ್ಚೆ

ಅಧ್ಯಕ್ಷರು:- ಮುಂದೆ ಸದನ ಸೇರುವುದು ಬುಧವಾರ, ಅವೃತ್ತಿನ, ದಿವಸ ಶೂನ್ಯ ವೇಳೆಯಲ್ಲಿ ಮೊದಲನೇ ಹೆಸರು ನಿಮ್ಮದೇ. ಈಗ ನಿಯಮ ೪೫ರ ಪ್ರಕಾರ ಶ್ರೀಯು. ಬಿ.ಬಣಕಾರ್ ರವರು ಮಾತನಾಡಿ.

ಹಿರೇಕೆರೂರು ತಾಲ್ಲೂಕಿಗೆ ಜನತಾ ಮನೆ ಯೋಜನೆಯಲ್ಲಿ ಹಣ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಯು.ಬಿ. ಬಣಕಾರ್:- ಮಾನ್ಯ ಅಧ್ಯಕ್ಷರೇ, ಈ ಹಿಂದಿನ ಜನತಾ ಮನೆ ಯೋಜನೆಯಲ್ಲಿ ಧಾರವಾಡ ಜಿಲ್ಲೆಗೆ ೧೧ ಕೋಟಿ ೭೦ ಲಕ್ಷರೂ. ಗಳನ್ನು ಅದರಲ್ಲಿ ಹಿರೇಕೆರೂರು ತಾಲ್ಲೂಕಿಗೆ ೧೭ ಲಕ್ಷ ರೂ.ಗಳನ್ನು ಕೊಡಬೇಕಾಗಿದ್ದು ಸುಮಾರು ನಾಲ್ಕೈದು ಸಾವಿರಗಳಾದರೂ ಇಲ್ಲಿಯವರೆವಿಗೂ ಪಾವತಿಯಾಗಿಲ್ಲ. ಫಲಾನುಭವಿಗಳಿಗೆ ತುಂಬಾ ತೊಂದರೆ ಆಗಿದೆ. ದಿನನಿತ್ಯ ಈ ಬಗ್ಗೆ ಒತ್ತಾಯಿಸುತ್ತಿದ್ದಾರೆ. ಕೂಡಲೇ ಈ ಹಣವನ್ನು ಪಾವತಿ ಮಾಡುವುದರ ಬಗ್ಗೆ ಮಾನ್ಯ ವಸತಿ ಸಚಿವರಲ್ಲಿ ಕ್ರಮ ಕೈಗೊಳ್ಳಲು ವಿನಂತಿಸುತ್ತೇನೆ.